ಅಧ್ಯಕ್ಷರು.—ನಾನು ನೋಡುತ್ತೇನೆ.

ಶ್ರೀ ವಿ. ಬಿ. ಭಾವಿ.—ನಮಗೆ ತಿಳಿದ ಮಾಹಿತಿ ಪ್ರಕಾರ ಉಪವಾಸವಿದ್ದು, ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ ಆದ್ದರಿಂದ ಕಾರ್ಖಾನೆಗಳ ಕೆಲಸಗಾರರು ಕೆಲಸ ಹೋಗಬೇಕಾದರೆ, ಸರ್ಕಾರ ಅವರಿಗೆ ಎಲ್ಲ ರೀತಿಯ ರಕ್ಷಣೆ ಕೊಡುತ್ತದೆಯೆ? ಕಾರ್ಮಿಕರಿಗೆ ಆಡ್ಡಿ ಆಡಚಣೆ ಮಾಡದಂತ ವ್ಯವಸ್ಥೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಮಾಡುತ್ತಾರೆಯೆ? ಇವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣ ಏನು ಏನ್ನುವುದನ್ನು ತನಿಖೆಗೆ ಒಳಪಡಿಸಬೇಕೆಂದು ಕೇಳುತ್ತೇನೆ.

ಶ್ರೀ ಪಿ. ಎನ್. ರೆಡ್ಡಿ.—ಸ್ವಾಮಿ, ನಾನು ಸಹ ಅದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಅನೇಕ ಜನರು ಆರ್ಥಿಕ ಅಭಾವದಿಂದ ಪ್ರಾಣಗಳನ್ನೇ ಅಲ್ಲ, ಸಂಸಾರಗಳನ್ನು ಕೂಡ ಬಿಡಲಿಕ್ಕೆ ಪ್ರಯತ್ನ ಮಾಡಿದ್ದಾರೆಂದು ಕೇಳಿದ್ದೇವೆ. ಅನೇಕ ಜನ ಕಾರ್ಮಿಕ ಮುಖಂಡರುಗಳಿನಿಸಿಕೊಂಡವರು ಕೆಲಸಕ್ಕೆ ಹೋಗುವಂತ ಕಾರ್ಮಿಕರನ್ನು ತಡೆಯುತ್ತಿದ್ದಾರೆ. ರಾಜ್ಯದಲ್ಲಿ ಎರಡು ಕೋಟಿ ಜನ ಒಂದು ಹೊತ್ತಿಗೆ ಊಟವಿಲ್ಲದೆ ಸಾಯುತ್ತಿದ್ದಾರೆ. ಇಂಥ ಅಭಾವ ಪರಿಸ್ಥಿತಿಯಲ್ಲಿ ಅನೇಕ ಜನ ಕಾರ್ಮಿಕರು ಹಳ್ಳಿಗಳಿಂದಲೂ ಕೂಡ ಕೆಲಸಕ್ಕೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಂಥವರಿಗೂ ಕೂಡ ತೊಂದರೆ ಕೊಡುತ್ತಿದ್ದಾರೆ? ಸರ್ಕಾರ ಇದನ್ನು ತಡೆಗಟ್ಟುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ದಯವಾಡಿ ಕೇಳಿ, ನೋಟೀಸ್ ಬಂದಿದೆ, ನಾನು ಕೂಲಂಕಷವಾಗಿ ನೋಡಿ ಸರ್ಕಾರದಿಂದ ಮಾಹಿತಿ ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಇವತ್ತು ಏನು ಪ್ರಯತ್ನ ನಡೆಯುತ್ತದೆ? ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಇವರು ಭಾಷಣ ಮಾಡುತ್ತಿದ್ದಾರೆ. ಇವರು ಏತಕ್ಕೆ ಈ ರೀತಿ ಮಾತನಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಇಂಥ ಆತ್ಮಹತ್ಯೆ ಎಷ್ಟು ನಡೆಯುತ್ತಿವೆ? ಇದಕ್ಕೂ ಅದಕ್ಕೂ ಏತಕ್ಕೆ ಸಂಬಂಧ ಕಲ್ಪಿಸಬೇಕು. ತಾವು ಇದರ ಬಗ್ಗೆ ಅವಕಾಶ ಕೊಡುವುದಕ್ಕೆ ನನ್ನ ಅಭ್ಯಂತರ ಇಲ್ಲ. ಆದರೆ, ಈ ಸಂದರ್ಭದಲ್ಲಿ ಚರ್ಚೆ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಪಿ. ರಾಂದೇವ್.—ನಾನು ಒಂದು ಕಾಲ್‌ಅಟೆನ್‌ಷನ್ ಮೋಷನ್ ಕಳುಹಿಸಿದ್ದೇನೆ. ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಸಮಸ್ಯೆ ಬಗ್ಗೆ, ಬೊಂಬಾಯಿ ಶಾಸನ ಸಭೆಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದಾರೆ; ನಮಗೂ ಕೂಡ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಬೊಂಬಾಯಿನಲ್ಲಿ ಗಡಿ ವಿವಾದದ ಬಗ್ಗೆ ಎಂ.ಇ.ಎಸ್. ನವರು, ಶಿವಸೇನೆಯವರಂ ಪ್ರದರ್ಶನ ಏರ್ಪಾಡು ಮಾಡಿದ್ದಾರೆ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ನಾನು ಒಂದು ಅಡ್ಜರ್ನಮೆಂಟ್ ಮೋಷನ್ ಕಳುಹಿಸಿದ್ದೆ. ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ೧೫,೦೦೦ ಜನ ಕೆಲಸಗಾರರು ಚಳವಳಿ ಮಾಡುತ್ತಿದ್ದಾರೆ. ಈಗ ಸುಮಾರು ೨೦೦ ಕೋಟಿ ರೂಪಾಯಿಗಳ ಸಾಲವನ್ನು ರೈತರುಗಳಿಗೆ ಕೊಡಬೇಕಾಗಿದೆ. ಚಳುವಳಿಯಿಂದ ದೊಡ್ಡ ಸಮಸ್ಯೆಯಾಗಿ ಸೊಸೈಟಿಗಳ ಕೆಲಸ ನಡೆಯುತ್ತಿಲ್ಲ. ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ನೋಡುತ್ತೇನೆ, ಈಗ ಕಾಗದ ಪತ್ರಗಳನ್ನು ಸಭೆಯ ಮುಂದಿಡುವುದು.

ಮುಂಡಿಸಲ್ಪಟ್ಟ ಕಾಗದ ಪತ್ರಗಳು

ಶ್ರೀ ಬೇಗಾನೆ ರಾಮಯ್ಯ.—ಅಧ್ಯಕ್ಷರೇ, ಅರ್ಥಮಂತ್ರಿಗಳ ಹೆಸರಿನಲ್ಲಿರತಕ್ಕ ಕಾಗದ ಪತ್ರಗಳು ಸಭೆಯ ಮುಂದೆ ಮಂಡಿಸುತ್ತೇನೆ.

Notification No. FD 14 CET 81 dated 2nd March, 1981.

Collection of 1% of Tax by certain Corporations and Municipalities in the State on the entry of goods,

as required under Section 30(5) of the Karnataka Tax on Entry of Goods into local areas for consumption, use or sale therein Act, 1979.

ಅಧ್ಯಕ್ಷರು.—ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಈಗ ಗಮನ ಸೆಳೆಯುವ ಸೂಚನೆ

CALLING ATTENTION TO MATTERS OF URGENT PUBLIC IMPORTANCE

re : Non-supply of electricity to the agriculturists and house holders in Mall r and Mulbagal Tq.

SRI P. N. REDDY.—I call the attention of the Minister of State for Power to the non-supply of electricity to the agriculturists and house holders in Malur and Mulbagal taluks.

SRI ASHWATHA REDDY (Minister of State for Power).—I wish to make the following statement.

There has been some delay in supply of essential materials like poles, transformers, insulators etc., to all the Divisions.

However, arrangements are made to divert P.C.C. poles from Koppal to Kolar District along with the other matching materials to tide over the situation. The materials are expected at Mulbagal and Malur within about a week's time and power supply to the consumers is being expedited.

† ಶ್ರೀ ಪಿ. ಎನ್. ರೆಡ್ಡಿ (ಮಾಲೂರು).—ಮಾನ್ಯ ಅಧ್ಯಕ್ಷರೇ, ಸರ್ಕಾರದ ಅಧಿಕಾರಿಗಳು ಕೊಟ್ಟಿರತಕ್ಕ ವರದಿಯನ್ನು ನೋಡಿದರೆ, ನಮ್ಮ ಸಮಸ್ಯೆಯನ್ನು ಬಹಳ ಹಗುರವಾಗಿ ತೆಗೆದುಕೊಂಡಂತೆ ಕಾಣಿಸುತ್ತದೆ. ಕೇವಲ ಒಂದೆರಡು ದಿವಸ ಟ್ರಾನ್ಸ್‌ಫಾರ್ಮರ್ ತೊಂದರೆಯಾದರೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತದೆ. ನಮ್ಮ ಕಷ್ಟ ಏನು ಎನ್ನುವುದನ್ನು ಅಧಿಕಾರಿಗಳು ಅರ್ಥಮಾಡಿಕೊಂಡಂತೆ ಕಾಣುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೂ ರೈತರ ಕಷ್ಟ ಏನು ಎನ್ನುವುದು ಗೊತ್ತಿದೆ. ಸರಿಯಾಗಿ ಪವರ್ ಎಳೆಯಬೇಕಾದರೆ, ಸರಿಯಾದ ಟ್ರಾನ್ಸ್‌ಫಾರ್ಮರ್ ಇರಬೇಕು. ನಾನು ಒಬ್ಬ ರೈತ ನಮ್ಮ ಭಾಗದಲ್ಲಿ ಟ್ರಾನ್ಸ್‌ಫಾರ್ಮರ್ ತೊಂದರೆಯಿಂದ ನನಗೆ ೨೫ ಸಾವಿರ ರೂಪಾಯಿ ನಷ್ಟವಾಗಿದೆ. ನಮ್ಮ ತಾಲ್ಲೂಕು ಒಂದರಲ್ಲಿ ಸುಮಾರು ೧೦–೧೨ ಲಕ್ಷ ರೂಪಾಯಿಗಳು ರೈತರಿಗೆ ನಷ್ಟವಾಗಿದೆ. ಒಂದು ಟ್ರಾನ್ಸ್‌ಫಾರ್ಮರ್ ಕೊಡುವುದಕ್ಕೆ ೨–೩ ತಿಂಗಳು ಡಿಲೆ ಮಾಡಿದರೆ ಹೇಗೆ? ಮುಳುಬಾಗಿಲು ತಾಲ್ಲೂಕಿನಲ್ಲಿ ಲೋಕೋಪಯೋಗಿ ಮಂತ್ರಿಗಳು ಬಂದಾಗ ಇನ್ನು ಎರಡು ತಿಂಗಳಲ್ಲಿ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತೇವೆಂದು ಹೇಳಿದರು. ಇನ್ನೂ ಕೂಡ ಏನೂ ಆಗಿಲ್ಲ. ಇಡೀ ನಮ್ಮ ಜಿಲ್ಲೆ ಅನಾವೃಷ್ಟಿಗೆ ಒಳಗಾಗಿದೆ. ಸರ್ಕಾರ ಕೂಡ ಅನಾವೃಷ್ಟಿ ಜಿಲ್ಲೆಯೆಂದು ಪರಿಗಣಿಸಿದೆ. ಸಾಲ ಸೋಲ ಮಾಡಿ ನೀರಾವರಿ ಪಂಪುಸೆಟ್ಟುಗಳನ್ನು ತಂದಿರತಕ್ಕ ರೈತರಿಗೆ ವಿದ್ಯುತ್ ಒದಗಿಸದೇ, ಪೋಲುಗಳು ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ, ಇನ್ಸುಲೇಟರ್ಸ್ ಇಲ್ಲ ಅಂದರೆ ಹೇಗೆ? ಸರ್ಕಾರ ದೊಡ್ಡ ದೊಡ್ಡ ರೈತರಿಂದ ಸಾಲ ವಸೂಲು ಮಾಡುವುದಕ್ಕೆ ಆಜ್ಞೆ ಮಾಡಿದ್ದಾರೆ. ಕರೆಂಟ್ ಸರಿಯಾಗಿ ಒದಗಿಸದೇ ಇದ್ದರೆ, ನಾವು ಸಾಲ ಹೇಗೆ ತೀರಿಸುವುದಕ್ಕೆ ಸಾಧ್ಯ. ಬೆಂಗಳೂರು ನಗರದಲ್ಲಿರತಕ್ಕ ಕೊಟ್ಟಿರತಕ್ಕ ಹಾಲ್ ಎಲೆಕ್ಟ್ರಿಕ್ ನಿಲ್ಲಿಸಿ ನೀರಾವರಿ ಪಂಪುಸೆಟ್ಟುಗಳಿಗೆ ಕರೆಂಟ್ ಒದಗಿಸುವ ವ್ಯವಸ್ಥೆ ಮಾಡಿ. ನಮ್ಮ ಭಾಗಕ್ಕೆ ತಕ್ಷಣ ೧೫೦ ಪೋಲುಗಳನ್ನು ಕೊಟ್ಟರೆ ಕಳೆದ ಎರಡು ತಿಂಗಳಿಂದ ಸುಮಾರು